Jain College

# ಕನ್ನಡ ಹಬ್ಬ : ಜೈನ್ ಕಾಲೇಜಿನಲ್ಲಿ ಕನ್ನಡ ಸಾಂಸ್ಕೃತಿಕ ಕಲರವ

**“ಹಚ್ಚೇವು ಕನ್ನಡದ ದೀಪ, ಕರುನಾಡ ದೀಪ, ಸಿರಿ ನುಡಿಯ ದೀಪ, ಒಲವೆತ್ತಿ ತೋರುವ ದೀಪ”** – ಎಂದು ಜೈನ್ ಕಾಲೇಜಿನ ವಿದ್ಯಾರ್ಥಿಗಳು ಹಾಡುತ್ತಾ ಕನ್ನಡದ ದೀಪವನ್ನ ನೆರೆದಿದ್ದವರ ಮನದಲ್ಲಿ ಹಚ್ಚುತ್ತಿದ್ದರೆ, ವಾತಾವರಣವೆಲ್ಲ ಕನ್ನಡಾಭಿಮಾನದಿಂದ ತುಂಬಿ ತುಳುಕುತ್ತಿತ್ತು. ಕನ್ನಡ ಭಾಷೆಯ ಪ್ರಸರಣ ಹಾಗೂ ಕನ್ನಡತನವನ್ನು ಜಾಗೃತಗೊಳಿಸುವ ಉದ್ದೇಶದಿಂದ ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಗಿದ್ದ **‘ಕನ್ನಡ ಹಬ್ಬ’** ಕಾರ್ಯಕ್ರಮವು ಸಾಂಸ್ಕೃತಿಕ ಹಾಗೂ ಸಾಹಿತಿಕ ಸೇತುವೆಯಾಗಿ ಮೂಡಿಬಂದದ್ದು ವಿಶೇಷ.

**“ನಾವು ಬ್ರಿಟಿಷರನ್ನು ಮಾತ್ರ ಓಡಿಸಿದ್ದೇವೆ, ಆದರೆ ಅವರ ಭಾಷೆಯನ್ನ ನಮ್ಮಲ್ಲೆ ಉಳಿಸಿಕೊಂಡು ಬಿಟ್ಟಿದ್ದೇವೆ”** ಎಂದು ವಿಷಾದಿಸುತ್ತಾ ತಮ್ಮ ಮಾತಿಗೆ ಮೊದಲಿಟ್ಟರು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದಂತಹ ಹೆಸರಾಂತ ಸಾಹಿತಿ ಡಾ. ಚಂದ್ರಶೇಖರ ಕಂಬಾರರು. ಇಂದಿನ ಪೀಳಿಗೆಯ ಮಕ್ಕಳಲ್ಲಿ ಪ್ರತಿಷ್ಠೆಯ ಪರಾಕಾಷ್ಠೆ ಮರೆತು, ಸೃಜನಶೀಲತೆಯನ್ನು ಕನ್ನಡ ಭಾಷೆಯ ಮೂಲಕ ಬೆಳೆಸುವ ಅವಶ್ಯಕತೆ ಇದೆ ಎಂದು ಹೇಳುತ್ತಾ ಕಾರ್ಯಕ್ರಮಕ್ಕೆ ಮೂರ್ತ ರೂಪವನ್ನು ಕೊಟ್ಟರು. ಜೈನ್ ಕಾಲೇಜಿನ ವಿದ್ಯಾರ್ಥಿಗಳ ಕನ್ನಡ ಬಗೆಗಿನ ಪ್ರೀತಿ, ಉತ್ಸಾಹದ ಬಗ್ಗೆ ಇದೇ ಸಂದರ್ಭದಲ್ಲಿ ತಮ್ಮ ಮೆಚ್ಚುಗೆಯನ್ನು ಅಭಿವ್ಯಕ್ತಪಡಿಸಿದರು.

**ವಿದ್ಯಾರ್ಥಿಗಳು ನಡೆಸಿಕೊಟ್ಟ ಭರತನಾಟ್ಯ, ಯಕ್ಷಗಾನ, ಕಂಸಾಳೆ,ಭಾವಗೀತಾ ಗಾಯನ ಮತ್ತು ಅಂತ್ಯದಲ್ಲಿ ಮೂಡಿಬಂದ ವಾದ್ಯವೃಂದ ಕಾರ್ಯಕ್ರಮಗಳು ಪ್ರೇಕ್ಷಕರನ್ನು ಮನಸೆಳೆದವು.**

ಕಾರ್ಯಕ್ರಮದಲ್ಲಿ ಪ್ರೊ. ಕೆ. ಶಾಂತಮಣಿ, ಮಾರ್ಗದರ್ಶಕರು, ಜೈನ್ ಸಮೂಹ ಸಂಸ್ಥೆ, ಡಾ. ಬಿ ಟಿ ವೆಂಕಟೇಶ್, ನಿರ್ದೇಶಕರು, ಪಿ ಯು ಪ್ರೋಗ್ರಾಮ್ ಮೊದಲಾದವರು ಉಪಸ್ಥಿತರಿದ್ದರು.